**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** 608/2023 **PW** -2

**ದಿಃ13.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀ ಎಸ ಕೆ ಪಾಟೀಲ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ವಿಚಾರಣೆಗೆ ಸಂಬಂಧಿಸಿದಂತೆ ಅಂಗನ್ಯೂನತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಪಿ 9 ಎಂದು ಹಾಗೂ ಸಾಕ್ಷಿದಾರರ ಸ ಹಿಯನ್ನು ನಿಶಾನೆ ಪಿ 9(ಎ) ಎಂದು, 11 ಎಕ್ಸರೆ ಪೀಲ್ಮಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಶಾನೆ ಪಿ 10 ಎಂದು, entire case sheet ನ್ನು ಹಾಜರುಪಡಿಸಿದ್ದು ನಿಶಾನೆ ಪಿ 11 ಗುರ್ತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಾದ ಶ್ರೀಮತಿ ಎ.ಎಸ.ಡಿರವರಿಂದ.**

ದಿಃ24-03-2023 ರಂದು ಅಂದರೆ ಅಪಘಾತವಾದ ತಕ್ಷಣ ನಾನು ಗಾಯಾಳುವನ್ನು ನೋಡಿಲ್ಲ ಎಂದರೆ ಸಾಕ್ಷಿ ಅದೇ ದಿನ ಸಂಜೆ ನೋಡಿರುತ್ತೇನೆ ಎನ್ನುತ್ತಾರೆ. ಅಪಘಾತವಾದ ತಕ್ಷಣ ಅವರು ಕೆಎಂಸಿಗೆ ದಾಖಲಾದರು ಎಂದರೆ ಸರಿ. ನೀವು ಆ ಸಮಯದಲ್ಲಿ ಕೆಎಂಸಿಯವರು ನೀಡಿರುವ ಒಳರೋಗಿ ಹಿಸ್ಟರಿಯನ್ನು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎನ್ನುತ್ತಾರೆ. ದಿಃ04-04-2023 ರಂದು ಅವರು ಡಿಸಚಾರ್ಜ ಆದ ನಂತರ ಮತ್ತೆ ನೀವು ಯಾವಾಗ ಅವರಿಗೆ treatment ಕೊಟ್ಟಿರಿ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಎನ್ನುತ್ತಾರೆ. ದಿಃ04-04-2023 ರಿಂದ ಅವರು ಡಿಸಚಾರ್ಜ ಆದ ನಂತರ ನಾನು disability ಗಾಗಿ ಅವರನ್ನು ನೋಡಿದ್ದು ದಿಃ02-07-2025 ವರೆಗೂ ನಾನು ಅವರನ್ನು ನೋಡಿಲ್ಲವೆಂದರೆ ಸಾಕ್ಷಿ ಮಧ್ಯ follow up treatment ಕೊಟ್ಟಿರುತ್ತೇನೆ ಎನ್ನುತ್ತಾರೆ. ದಿಃ02-07-2025 ರ ನಂತರ ಅರ್ಜಿದಾರರನ್ನು ನಾನು ನೋಡದೆ ಇರುವ ಕಾರಣ ಅವರಿಗೆ ಆದಂತಹ ಗಾಯಗಳು ಗುಣಮುಖವಾಗಿರಬಹುದು ಎಂದರೆ ಸಾಕ್ಷಿ ಅವರಿಗೆ ಅಂಗನ್ಯೂನತೆ ಶಾಶ್ವತವಾಗಿ ಇರುವುದರ ಕಾರಣ ಗುಣಮುಖವಾಗುವ ಪ್ರಮಾಣ ಕಡಿಮೆ ಎನ್ನುತ್ತಾರೆ. ನಾನು 2023 ರಿಂದ 2025 ರವರೆಗಿನ series of X ray ವರದಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ

ಎನ್ನುತ್ತಾರೆ. ನಾನು ಸದರಿಯವರಿಗೆ ಮೊದಲು ಯಾವ ಕಂಡಿಷನ ಇತ್ತು ಮತ್ತು ಈಗ ಯಾವ ಕಂಡಿಷನ ಇದೆ ಎಂಬ ಬಗ್ಗೆ ನ್ಯಾಯಾಲಯಕ್ಕೆ ವರದಿ ನೀಡಿಲ್ಲ ಎಂದರೆ ಸಾಕ್ಷಿ ನೀಡಿಲ್ಲ ಎನ್ನುತ್ತಾರೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ನ್ಯೂನತೆಗಳನ್ನು ಯಾವ ರೀತಿ assess ಮಾಡಿರುವ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಹೇಳಿಲ್ಲವೆಂದರೆ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎನ್ನುತ್ತಾರೆ.

ನಾನು functional disability ಬಗ್ಗೆ assess ಮಾಡಿರುತ್ತೇನೆ ಆದರೆ loss of earning capacity ಬಗ್ಗೆ ಮಾಡಿರುವುದಿಲ್ಲ ಹಾಗೂ ಸಂಪೂರ್ಣ ದೇಹದ ಅಂಗನ್ಯೂನತೆ ಕೂಡಾ assess ಮಾಡಿಲ್ಲವೆಂದರೆ ಸರಿ. ನಾನು ನೀಡಿರುವ ಶೇಕಡಾ 35 ಹಾಗೂ 15 ರಷ್ಟು ಅಂಗನ್ಯೂನತೆ ಯಾವುದೇ basis ಇಲ್ಲದೆ ಕೇವಲ ಅರ್ಜಿದಾರರಿಗೆ ಸಹಾಯ ಮಾಡುವ ದೃಷ್ಟಿಯಿಂದ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ನಮ್ಮ ವರದಿ ಪ್ರಕಾರ ಅರ್ಜಿದಾರರಿಗೆ ಆದ ಗಾಯಗಳು ಗುಣವಾಗಿದ್ದುಆ ಅವರು ಮೊದಲಿಗಿಂತ ಈಗ better ಇರುತ್ತಾರೆ ಎಂದರೆ ಸಾಕ್ಷಿ ಸರಿ ಅಲ್ಲ ಎನ್ನುತ್ತಾರೆ. ನಾನು ಎಕ್ಸರೆ ಜೊತೆ ಯಾವುದೇ radiological report ಹಾಜರುಪಡಿಸಿಲ್ಲವೆಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ to remove the nail plate and screws and it will cost him about Rs.85,000/- to Rs.90,000/- ಇದು ಯಾವುದೇ ಆಧಾರ ಇಲ್ಲದೆ ಕೇವಲ ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ನೀಡಿರುತ್ತೇನೆಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ permanent disability Healed operative scar present over the right thigh, right forearm and Healed operative scar present on right ulna ಎಂಬುವುದಾಗಿ ಹೇಳಿದ್ದು ಅದರಲ್ಲಿ scar is healed ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

ದಿಃ02-07-2025 ರ ನಂತರ ಅರ್ಜಿದಾರರ ಕಂಡಿಷನ ಹೇಗೆ ಇದೆ ಎಂದು ನಾನು ಅವರಿಗೆ ಯಾವುದೇ treatment ಮಾಡಿಲ್ಲ ಎಂದರೆ ಸಾಕ್ಷಿ ಮಾಡಿದ್ದೇನೆ ಎನ್ನುತ್ತಾರೆ. ನಾನು ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ನಾನು ಯಾವುದೇ treatment ಕೊಟ್ಟಿಲ್ಲವೆಂದರೆ ಸಾಕ್ಷಿ treatment ಕೊಟ್ಟಿದ್ದೇನೆ ಆದರೆ ರೆಕಾರ್ಡ ಹಾಜರುಪಡಿಸಿಲ್ಲ ಎನ್ನುತ್ತಾರೆ. ದಿಃ04-04-2023 ರಿಂದ ನಾನು ಯಾವುದೇ ರೀತಿ ಹೆಚ್ಚಿನ ಚಿಕಿತ್ಸೆ ಕೊಟ್ಟಿರುವುದಿಲ್ಲ ಆದರು ಅರ್ಜಿದಾರರಿಗೆ ಸಹಾಯ ಮಾಡುವ ದೃಷ್ಟಿಯಿಂದ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ